**ಓ.ಎಸ್. ನಂ. 323/2019 ಪಿ.ಡಬ್ಲೂ-1 ಹೆಸರು - ಮಹದೇವ**

**ಸಾಕ್ಷಿಯನ್ನು ದಿನಾಂಕಃ 24/02/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಕೆ.ಎಸ್.ಎನ್. ಪ್ರತಿವಾದಿ ಪರ ವಕೀಲರಿಂದಃ-**

ದಾವಾ ಆಸ್ತಿಯ ಚೆಕ್ಕುಬಂಧಿಃ ಪೂರ್ವಕ್ಕೆ- ರಂಗಶೆಟ್ಟಿರವರ ಸ್ವತ್ತು, ಪಶ್ಚಿಮಕ್ಕೆ - ರಾಮಮಂದಿರ , ದಕ್ಷಿಣಕ್ಕೆ- ಮುಕ್ಕಿಮಾದಯ್ಯರ ಜಮೀನು, ಉತ್ತರಕ್ಕೆ -ಸರ್ಕಾರಿ ರಸ್ತೆ. ದಕ್ಷಿಣಕ್ಕೆ ಮುಕ್ಕಿಮಾದಯ್ಯ ರ ಜಮೀನು ಇಲ್ಲ ರಸ್ತೆ ಇದೆ ಎಂದರೆ ಸಾಕ್ಷಿಯು ಮೊದಲು ಮುಕ್ಕಿಮಾದಯ್ಯನ ಜಮೀನು ಇತ್ತು ನಂತರ ಅಲ್ಲಿ ನಿವೇಶನಗಳು ಆಗಿದ್ದರಿಂದ್ದಾಗಿ ಅಲ್ಲಿ ರಸ್ತೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪೂರ್ವಕ್ಕೆ ರಾಮಕೃಷ್ಣ ಬಿನ್ ಬೊಮ್ಮಶೆಟ್ಟಿ ರವರ ಮನೆ ಇದೆ ಎಂದರೆ ಸರಿ. ಮೇಲೆ ಹೇಳಿದ ಚೆಕ್ಕುಬಂಧಿಯೊಳಗೆ ಮನೆ ಇದೆ ಎಂದರೆ ಸಾಕ್ಷಿಯು ಖಾಲಿ ನಿವೇಶನ ಮತ್ತು ಸ್ವಲ್ಪ ಭಾಗದಲ್ಲಿ ಮನೆ ಇದೆ ಎಂದು ನುಡಿಯುತ್ತಾರೆ. ಸದರಿ ಮನೆ ಕಟ್ಟಿ ಸುಮಾರು 30 ವರ್ಷ ಆಗಿದೆ. ಸದರಿ ಮನೆಯಲ್ಲಿ ಪ್ರತಿವಾದಿ ಇದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿ ತನಗೆ ಮನೆ ಇಲ್ಲ ಎಂದು ಹೇಳಿದ್ದರಿಂದ್ದಾಗಿ ಸದರಿ ಮನೆಯಲ್ಲಿ ಇರಲು ಅವರಿಗೆ ಬಿಟ್ಟುಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಮನೆಯನ್ನು ಪ್ರತಿವಾದಿಯರ ತಂದೆ ಸಣ್ಣಶೆಟ್ಟಿ ಕಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಖಾಲಿ ನಿವೇಶನವಿಲ್ಲ, ದಕ್ಷಿಣ ಭಾಗದಲ್ಲಿ ಕೊಟ್ಟಿಗೆ ಇದೆ ಎಂದರೆ ಸಾಕ್ಷಿಯು ಕಂಬಗಳನ್ನು ನಿಲ್ಲಿಸಿ ಶೆಡ್ ಹಾಕಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಅಸಸ್ ಮೆಂಟ್ ನಕಲು, ನೀರಿನ ಬಿಲ್ ಮತ್ತು ವಿದ್ಯುತ್ ಬಿಲ್ ಎಲ್ಲವೂ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ಮನೆ ಕಟ್ಟುವಾಗ ನಾನಾಗಲೀ ಅಥವಾ ನನ್ನ ತಂದೆಯಾಗಲೀ ಪಂಚಾಯಿತಿಯಿಂದ ಪರವಾನಿಗೆ ಪಡೆದಿರಲಿಲ್ಲ. ದಾವಾ ಆಸ್ತಿಯು ನಿಮ್ಮ ಹೆಸರಿನಲ್ಲಿ ಇದೆ ಎಂದು ತೋರಿಸಲು ಅಸಸ್ ಮೆಂಟ್ ರಿಜಿಸ್ಟರ್ ಎಕ್ಸ್ ಟ್ರಾಕ್ಟ್ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರ ತಂದೆ ಮನೆ ಕಟ್ಟಿಕೊಂಡು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾನು ಅಂಬಳೆ ಗ್ರಾಮದಲ್ಲಿ ವಾಸವಿದ್ದೇನೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ಪ್ರತಿವಾದಿಯರ ಸ್ವಾಧೀನಕ್ಕೆ ನಾನು ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಖಾಲಿ ನಿವೇಶನವಲ್ಲ ಪ್ರತಿವಾದಿಯರು ಮನೆ ಕಟ್ಟಿದ್ದಾರೆ ಎಂದರೆ ಸಾಕ್ಷಿಯು ದಾವಾ ಹಾಕಿದ ನಂತರ ಪ್ರತಿವಾದಿಯರು ಶೆಡ್ ಅನ್ನು ಹಾಕಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಈ ದಾವೆ ಸಲ್ಲಿಸಲು ನನಗೆ ಯಾವುದೇ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗಂತಿಗಳು ಸುಳ್ಳು ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಯರಿಗೆ ಸಂಬಂಧಪಟ್ಟ ಸ್ವತ್ತು

ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು, ಅಧಿಕಾರ, ಸ್ವಾಧೀನ ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನಾನು ಅಂಬಳೆ ಗ್ರಾಮದಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**